೩) ಧಾರವಾಡ ವಿಶ್ವವಿದ್ಯಾನಿಲಯದ ೧೯೭೫-೭೬, ೧೯೭೬-೭೭ ಹಾಗೂ ೧೯೭೭-೭೮ನೇ ಸಾಲುಗಳ ವಾರ್ಷಿಕ ಲೆಕ್ಕಪತ್ರಗಳ ತನಿಖಾ ವರದಿಗಳು; ಹಾಗೂ

೪) ಮಂಗಳೂರು ವಿಶ್ವವಿದ್ಯಾನಿಲಯದ ೧೯೮೨-೮೩ನೇ ಸಾಲಿನ ವಾರ್ಷಿಕ ವರದಿ.

ಅಧ್ಯಕ್ಷರು.—ಕಾಗದಪತ್ರಗಳನ್ನು ಸಭೆಯ ಮುಂದೆ ಮಂಡಿಸಲಾಯಿತು.

ಹಕ್ಕುಚ್ಯುತಿ ನಿರ್ಣಯ ಸೂಚನೆಗೆ ಅನುಮತಿ ಕೋರಿಕೆ

ಶಿವಮೊಗ್ಗದ ಬುಧೀಖಾನೆ ಸಿಬ್ಬಂದಿಗೆ ಕಿರುಕುಳ ಕೊಟ್ಟು ಅವರನ್ನು ಬಂಧಿಸಿದ್ದರಿಂದ ಸಂಬಂಧಪಟ್ಟ ಸಬ್ ಇನ್ಸ್‌ಪೆಕ್ಟರ್ಸ್‌ನ್ನು ಅಮಾನತ್ತಿನಲ್ಲಿಡುವ ಬಗ್ಗೆ

ಶ್ರೀ ಕೆ. ಹೆಚ್. ಶ್ರೀನಿವಾಸ್.—ಸನ್ಮಾನ್ಯ ಅಧ್ಯಕ್ಷರೇ, ದಿನಾಂಕ ೨೯-೨-೮೭ ರಂದು ಶಿವಮೊಗ್ಗ ಜೈಲಿನ ಅಧಿಕಾರಿಗಳನ್ನು ಅಲ್ಲಿರುವ ಪೋಲೀಸ್ ಅಧಿಕಾರಿಗಳು, ಅಕ್ರಮವಾಗಿ ಬಂಧಿಸಿ, ಹಿಂಸಿಸಿದ್ದರ ಬಗ್ಗೆ ನಾನೊಂದು ಗಮನ ಸೆಳೆಯುವ ಸೂಚನೆ ಕೊಟ್ಟಿದ್ದೆ. ಅದಕ್ಕೆ ಮಾನ್ಯ ಗೃಹಸಚಿವರು ಉತ್ತರವನ್ನು ಕೊಟ್ಟರು.

ಉತ್ತರವನ್ನು ಕೊಡುವಾಗ ಅವರು ಹೇಳಿದರು, ಇದಕ್ಕೆ ಸಂಬಂಧಪಟ್ಟಿರತಕ್ಕಂಥ ಇಬ್ಬರು ಎಸ್. ಐ. ಅವರನ್ನು ಸಸ್ಪೆಂಡ್ ಮಾಡಿದ್ದೇನೆ ಮತ್ತು ಎಸ್. ಪಿ. ಬಗ್ಗೆ ಕೂಡ ವಿಚಾರಣೆ ಮಾಡುವುದಕ್ಕೆ ಆಜ್ಞೆ ಮಾಡಿದ್ದೇನೆ ಎಂದು ಅವರು ಹೇಳಿದರು. ಆಗ ನಾನು ಕೇಳಿದೆ, ನನಗೆ ಗೊತ್ತಿದ್ದ ಮಟ್ಟಿಗೆ ಯಾರನ್ನೂ ಸಸ್ಪೆಂಡ್ ಮಾಡಲಿಲ್ಲ, ಯಾವ ತಾರೀಖಿಗೆ ಸಸ್ಪೆಂಡ್ ಮಾಡಿದ್ದೀರಿ, ಯಾರ್ಯಾರನ್ನು ಸಸ್ಪೆಂಡ್ ಮಾಡಿದ್ದೀರಿ ಎಂದು ಕೇಳಿದೆ. ಆಗ ಅವರು ಹೇಳಿದರು ಇಬ್ಬರು ಎಸ್.ಐ. ಗಳನ್ನು ಸಸ್ಪೆಂಡ್ ಮಾಡಿದ್ದೇನೆ. ಒಬ್ಬರು ಗಂಗಾಧರಯ್ಯ, ಇನ್ನೊಬ್ಬರು ಆಂಬಿಗೇರ್ ಸಸ್ಪೆನ್‌ಷನ್ ಆಜ್ಞೆ ಇನ್ನೂ ಅವರಿಗೆ ತಲುಪಿಲ್ಲ ಎಂದು ಅವರು ಹೇಳಿದರು. ಇನ್ನೂ ಅವರಿಗೆ ತಲುಪಿಲ್ಲ ಎಂದರೆ ಏನು ಸ್ವಾಮಿ ಸಮಾಚಾರ, ನಾಲ್ಕನೇ ತಾರೀಖು ಆದರೂ ಅವರನ್ನು ಸಸ್ಪೆಂಡ್ ಮಾಡಿಲ್ಲ ಎಂದು ಆಗದರೆ ನಿಮ್ಮ ಇಲಾಖೆಗೆ ಏನು ಮರ್ಯಾದೆ ಬರುತ್ತದೆ ಎಂದು ಕೇಳಿದೆ. ಅದಕ್ಕೆ ಅವರು ಹೇಳಿದರು, ಒಂದು ಫೈಲಗಳ ಕಾಲ ಫೈಲ್ ಅವರ ಹತ್ತಿರ ಇತ್ತು, ನನ್ನ ಹತ್ತಿರ ಚರ್ಚೆ ಮಾಡಬೇಕೆಂದು ಇಟ್ಟು ಕೊಂಡಿದ್ದರು, ನಾನು ಮೊನ್ನೆ ದಿವಸ ತರಿಸಿಕೊಂಡು ಅದನ್ನು ಓದಿ ಬಿಟ್ಟು ತೀರ್ಮಾನ ತೆಗೆದು ಕೊಂಡಿದ್ದೇನೆ, ಎಂದು ಹೇಳಿದರು. ಇನ್ನೂ ನನಗೆ ನೆನಪಿದ್ದ ಮಟ್ಟಿಗೆ, ನಿನ್ನೆಯ ದಿವಸ ಸಸ್ಪೆನಶನ್ ಆರ್ಡರ್ ಹೋಗಿದೆ ಎಂದು ಹೇಳಿದರು. ನಾನು ಪದೇ ಪದೇ ಹೇಳಿದೆ, ಹೋಗಿಲ್ಲ, ಆಗಿಲ್ಲ ಎಂದು. ಇದಾದ ನಂತರ ಈಗ ಏನಾಯಿತು ಅಂದರೆ, ಆಲ್ಲಿಯ ಸಂಬಂಧಪಟ್ಟ ಡಿ.ಐ.ಜಿ. ಯವರು ಒಂದು ಪತ್ರಿಕಾ ಹೇಳಿಕೆಯನ್ನು ಕೊಟ್ಟರು. ಅದು ಫೆಬ್ರುವರಿ ಐದನೇಯ ತಾರೀಖಿನ ದಿವಸ. ಆದರಲ್ಲಿ " ಶಿವಮೊಗ್ಗದ ಜೈಲಿನ ಅಧಿಕಾರಿಗಳನ್ನು ವಿನಾಕಾರಣ ಬಂಧನದಲ್ಲಿಟ್ಟ ಆರೋಪದ ಮೇಲೆ ಇಬ್ಬರು ಪೋಲೀಸ್ ಎಸ್. ಐ. ಗಳನ್ನು ಸಸ್ಪೆಂಡ್ ಮಾಡಲಾಗಿದೆ ಎಂದು ಗೃಹ ಸಚಿವ ಬಿ. ರಾಚಯ್ಯನವರು ವಿಧಾನಸಭೆಯಲ್ಲಿ ತಿಳಿಸಿದುದಕ್ಕೆ ಸಂಬಂಧಪಟ್ಟಂತೆ ತಮಗೆ ಇಲ್ಲಿಯವರೆಗೆ ಯಾವುದೇ ಮಾಹಿತಿ ಬರಿದಿಲ್ಲ " ಎಂದು ಅವರು ಹೇಳಿದರು. ಈ ಘಟನೆಗೆ ಸಂಬಂಧಪಟ್ಟಂತೆ ಡಿ.ಐ.ಜಿ. ಯವರಿಂದ ವಿಚಾರಣೆ ನಡೆಸಲಾಗುತ್ತಿದೆ ಎಂದು ಸಚಿವರು ಹೇಳಿದ ಹಿನ್ನೆಲೆಯಲ್ಲಿ ವಿಚಾರಣೆ ನಡೆಸುವಂತೆ ತಮಗೆ ಇಲ್ಲಿಯವರೆಗೆ ಯಾವುದೇ ಆದೇಶ ಬಂದಿಲ್ಲ ಎಂದು ಡಿ.ಐ.ಜಿ. ಯವರು ಖಿನೇ ತಾರೀಖಿನಂದು ಹೇಳಿದರು. ಅವರು ಏನನ್ನೂ ಹೇಳದೆ ಸುಮ್ಮನೆ ಇರಬಹುದಾಗಿತ್ತು. ಅಥವಾ ವಿಧಾನಸಭೆಯಲ್ಲಿ ಮಂತ್ರಿಗಳು ಹೇಳಿದ್ದಾರೆ, ಅದಕ್ಕಿಂತ ಹೆಚ್ಚಿಗೆ ಏನೂ ಹೇಳಲಾರೆ ಎಂದು ಹೇಳಬಹುದಾಗಿತ್ತು. ಇವನ್ನು ನೋಡಿದರೆ, ನಿಮ್ಮ ಆಧಿಕಾರವೇ ಈ ಇಲಾಖೆಯಲ್ಲಿ ನಡೆಯುತ್ತಾ ಇಲ್ಲ ಎನ್ನುವ ಭಾವನೆ ಬರುವ ರೀತಿಯಲ್ಲಿ ಅವರು ಪತ್ರಿಕೆಗಳಲ್ಲಿ ಹೇಳಿಕೆ ಕೊಟ್ಟಾಗ ನಾನು ಅದಕೋಸ್ಕರವಾಗಿ ಒಂದು ಹಕ್ಕುಭಾಧ್ಯತ ಪ್ರಶ್ನೆಯನ್ನು ಎತ್ತ ಬೇಕೆಂದು ಈ ಸೂಚನೆಯನ್ನು ನಾನು ಕೊಟ್ಟಿದ್ದೇನೆ. ಇವತ್ತು ಆ ಕಡತದ ಪರಿಶೀಲನೆ ಮಾಡಿದರೆ

೧೨-೦೦ ಪಿ. ಎಂ.

ಗೊತ್ತಾಗುತ್ತದೆ. ೨ನೇ ತಾರೀಖು ಸಚಿವರು ಆಜ್ಞೆ ಮಾಡಿರಬಹುದು, ಆ ಆಜ್ಞೆ ನಿಮ್ಮ ಇಲಾಖೆ ಯಿಂದ ೪ನೇ ತಾರೀಖು ಹೊರಟದೆಯೇ ಹೊರತು ನೀವು ಈ ಸದನದಲ್ಲಿ ಹೇಳಿದ ರೀತಿ ಘಾರನೇ ದಿವಸವೇ ಆಗಲಿಲ್ಲ. ೨ನೇ ತಾರೀಖಿಗೆ ಖುಂಚಿತವಾಗಿ ಯಾವ ಸಸ್ಪೆನ್‌ಷನ್ನೂ ಆಗಿರಲಿಲ್ಲ. ಅಂದರೆ ತಮಗೆ ಇಲಾಖೆಯನ್ನು ರಕ್ಷಣೆ ಮಾಡುವ ದೃಷ್ಟಿಯಲ್ಲಿ ಈ ಸಭೆಗೆ ತಪ್ಪು ತಿಳಿವಳಿಕೆ ಕೊಟ್ಟಿದ್ದಾರೆ. ನನಗೆ

ಗೊತ್ತಿದ್ದ ಮೇಲೆ ಇವರು ಇಲ್ಲಿ ಓದಿರುವ ವರದಿ ತುಂಬಾ ಜೋಲ್ ಆಗಿದೆ, ಹೇಗೆಂದರೆ ಯಾವ ಎಸ್.ಪಿ. ಹೆಸರೂ ಸೈಫರ್‌ಗಾಗಿ ಉಲ್ಲೇಖವಿಲ್ಲ. ಇವರು ಇಲ್ಲಿ ವರದಿ ಓದಿದ ಮೇಲೆ ಆರೋಪ ವಿರುವ ಎಸ್.ಐ. ಯಾರು ಅತನ ಹೆಸರನ್ನು ತಿಳಿಸಲು ಇವರ ಕಚೇರಿಯಿಂದ ಕೇಬಲ್ ಕಳಿಸಿ ರಾತ್ರಿ ಎರಡು ಗಂಟೆಯೊಳಗೆ ಕಳಿಸಿಕೊಡಿ ಎಂದು ಹೇಳಿ ಹೆಸರು ತರಿಸಿ ವಿಧೇಯರಾಗಿ ನಿನ್ನೆ ತಾರೀಖು ಆರ್ಡರ್ ಮಾಡಿದ್ದಾರೆ. ಇದರಲ್ಲೂ ಸ್ಪಷ್ಟವಾಗಿದೆ, ಕಂಪ್ಲೇಂಟ್ ಇರುವುದು ಪರಮೇಶ್ವರಪ್ಪ ಅನ್ನೋ ಎಸ್.ಐ. ಮೇಲೆ. ಆದರೆ ಇವರು ಸಸ್ಪೆಂಡ್ ಮಾಡಿರುವುದು ಪಾಪ ಯಾರೊ ಗಂಗಾಧರಯ್ಯ ಎಂಬ ಸಂಬಂಧ ಪಡದ ಎಸ್.ಐ. ಅನ್ನು ಇತರೆಯವರ ಜೊತೆ ಸಸ್ಪೆಂಡ್ ಮಾಡಿದ್ದಾರೆ. ಈ ರೀತಿ ಮಾಡುವುದರಿಂದ ನ್ಯಾಯ ದೊರಕುವುದಿಲ್ಲ, ಯಾರಿಗೂ ಒಳ್ಳೆಯದಾಗುವುದಿಲ್ಲ ಮತ್ತು ವಿಚಾರಣೆಯನ್ನು ಪೋಲೀಸ್ ಮೇಲೆ ಪೋಲೀಸ್ ಇಲಾಖೆಯವರ ಕೈಲೇ ಮಾಡಿಸುವುದರಿಂದ, ಉದಾಹರಣೆಗೆ ಎಸ್.ಪಿ. ಯವರ ಮೇಲೆ ವಿಚಾರಣೆ ಮಾಡಿದರೆ ಯಾರೂ ಪೋಲೀಸಿನವರು ಸಾಕ್ಷಿ ಹೇಳುವುದಕ್ಕೆ ಹೋಗುವುದಿಲ್ಲ. ನ್ಯಾಯ ದೊರೆತಂತಾಗುವುದಿಲ್ಲ. ಸನದಕ್ಕೆ ತಪ್ಪು ಮಾಹಿತಿ ಕೊಟ್ಟು ಇಲಾಖೆಯನ್ನು ರಕ್ಷಿಸಿಕೊಳ್ಳಬೇಕೆಂಬುದಿದ್ದರೆ, ಮಾಡಿ. ಇಲ್ಲದಿದ್ದರೆ ಈಗಲಾದರೂ ಕೂಡ ಸಸ್ಪೆನ್‌ಷನ್ ಮಾಡಿದರೂ ಪರವಾಗಿಲ್ಲ, ಕೂಲಂಕುಷವಾಗಿ ವಿಚಾರಣೆಮಾಡಿ ತಪ್ಪಿತಸ್ಥರನ್ನು ಸಸ್ಪೆಂಡ್ ಮಾಡಿ, ಪೋಲೀಸ್ ಇಲಾಖೆಗೆ ಸಂಬಂಧ ಪಡದವರಿಂದ ಎನ್‌ಕ್ವೈರಿ ಮಾಡಿಸಬೇಕು, ಇಲ್ಲದೇ ಹೋದರೆ ಈ ಸದನಕ್ಕೆ ಹಕ್ಕುಚ್ಯುತಿ ಮಾಡಿದ್ದಾರೆಂದು ಪ್ರಶ್ನೆ ಎತ್ತಲು ಅವಕಾಶ ಮಾಡಿಕೊಟ್ಟಹಾಗೆ ಆಗುತ್ತದೆ.

ಶ್ರೀ ಬಿ. ರಾಚಯ್ಯ (ಗೃಹಮಂತ್ರಿಗಳು).—ಆ ದಿನ ಶ್ರೀ ಕೆ.ಹೆಚ್. ಶ್ರೀನಿವಾಸ್‌ರವರ ಗಮನ ಸಳೆಯುವ ಸೂಚನೆಗೆ ಈ ರೀತಿ ಉತ್ತರ ಕೊಟ್ಟಿದ್ದೇನೆ "……ಈ ಪ್ರಕರಣದ ಬಗ್ಗೆ ಕಾರಾಗೃಹದ ಉಪ ಮಹಾ ನಿರೀಕ್ಷಕರಿಂದ ಒಂದು ವರದಿಯನ್ನು ತರಿಸಲಾಗಿದೆ. ಪೋಲೀಸ್ ಉಪ ಮಹಾ ನಿರೀಕ್ಷಕ ರಿಂದಲೂ ಒಂದು ವರದಿ ತರಿಸಲಾಗಿದೆ ಈ ವರದಿಗಳನ್ನು ಪರಿಶೀಲಿಸಿ ಇಬ್ಬರು ಆರಕ್ಷಕ ಉಪ ನಿರೀಕ್ಷಕರನ್ನು ಅಮಾನತ್ತಿನಲ್ಲಿ ಕೂಡಲೇ ಇಡಬೇಕೆಂದು ಹಾಗೂ ಜಿಲ್ಲಾ ಆರಕ್ಷಕ ಅಧೀಕ್ಷಕರು ಅವರ ಬಗ್ಗೆ ವಿಚಾರಣೆ ಮಾಡಲು ಪೋಲೀಸ್ ಮಹಾ ನಿರ್ದೇಶಕರಿಗೆ ಕೇಳಲು ಆದೇಶವನ್ನು ಹೊರಡಿಸಬೇಕೆಂದು ಗೃಹಕಾರ್ಯದರ್ಶಿಯವರಿಗೆ ಅಜ್ಞೆ ನೀಡಲಾಗಿದೆ". ಹೀಗೆ ನಿನ್ನೆ ತಾರೀಖು ಹೇಳಿಕೆ ಕೊಟ್ಟಿದ್ದೇನೆ. ನಾನು ಮಾಡಿದ ಆಜ್ಞೆ ಕಾರ್ಯಗತವಾಗಲು ಎರಡು ದಿವಸ ತಡವಾಗಿರಬಹುದು ಈಗ ಆದರನ್ನು ಅಮಾನತ್ತಿನಲ್ಲಿಡಲಾಗಿದೆ ಎಂದು ನನಗೆ ಕಂಪ್ಲೀಟ್ ರಿಪೋರ್ಟ್ ಕೂಡ ಬಂದಿದೆ. ನನ್ನ ಉದ್ದೇಶವಾದರೂ ಕೂಡ ತಪ್ಪುದಾರಿಗೆಳೆಯುವುದಿಲ್ಲ. ಇಬ್ಬರು ಮಂತ್ರಿಗಳ ಇಲಾಖೆಗಳಿಗೆ ಈ ವಿಷಯ ಪ್ಯಾಪಿಟಿದ್ದುದರಿಂದ ಮತ್ತು ಪತ್ರಿಕೆಗಳಲ್ಲಿ ವಿಷಯ ಬೋಲ್ಡಾಗಿ ಬಂದಿದ್ದರಿಂದ ಕೂಲಂಕುಷವಾಗಿ ವಿಚಾರಣೆ ಮಾಡಿ ಎಂದು ಸಿಐಡಿಯ ಡಿ.ಐ.ಜಿ. ಅವರನ್ನು ಕೇಳಿದ್ದೆ ಅವರು ವರದಿಕೊಟ್ಟ ಮೇಲೆ ಸತ್ಕಾರ್ಯ ತಿಳಿದು ಬಂದು ಇಬ್ಬರು ಎಸ್.ಐ.ಗಳನ್ನು ಸಸ್ಪೆಂಡ್ ಮಾಡಿ ಎಂದು ಹೇಳಿದ್ದೇನೆ. ಇಷ್ಟು ಹೊತ್ತಿಗೆ ಜೈಲು ಇಲಾಖೆಯ ಅಧಿಕಾರಿಗಳೂ ಉದ್ಧಟತನದಿಂದ ವರ್ತಿಸಿರುವುದರಿಂದ ಅವರ ಮೇಲೂ ವಿಚಾರಣೆ ನಡೆಸಿ ಕ್ರಮ ಕೈಗೊಳ್ಳಿ ಎಂದು ಜೈಲು ಮಂತ್ರಿಗಳನ್ನೂ ನಾನು ಕೋರಿದಾಗ ಅವರೂ ಒಪ್ಪಿದ್ದಾರೆ. ವಿಚಾರಣೆ ನಡೆಸುವುದರಲ್ಲಿ ಸ್ವಲ್ಪ ತಡವಾಗಿದೆ, ಅದನ್ನು ಒಪ್ಪುತ್ತೇನೆ. ಇದು ಸ್ವಲ್ಪ ಗಂಭೀರ ವಿಷಯವಾಗಿದ್ದರಿಂದ ಹಾಗಾಗಿದೆ. ಅಷ್ಟೇ. ಇಲ್ಲಿ ನಾನು ಹೇಳಿಕೆ ಕೊಟ್ಟ ಮೇಲೆ ಆದು ಹೋಗಿ ಸೆಕ್ರೆಟರಿ ಆಫೀಸಿಗೆ ಹೋಗಿ ಅಲ್ಲಿಂದ ಡೆಪ್ಯುಟಿ ಸೆಕ್ರೆಟರಿ ಆಫೀಸಿಗೆ ಹೋಗಿ ಆ ಮೂಲಕ ಡಿ. ಐ. ಜಿ. ಯವರು ಆರ್ಡರ್ ಇಷ್ಯೂ ಮಾಡಿರುವುದರಿಂದ ಸ್ವಲ್ಪ ತಡವಾಗಿದೆ. ನಾನು ಆಜ್ಞೆ ಮಾಡಿದ್ದೇನೆ. ನಾನು ಇಲ್ಲಿ ಹೇಳಿರತಕ್ಕಂಥಾದ್ದರಲ್ಲಿ ಸತ್ಯಾಂಶವಿದೆ. ಈ ಸಭೆಯನ್ನು ತಪ್ಪುದಾರಿಗೆ ಎಳೆಯತಕ್ಕಂತಹ ಯಾವ ದುರುದ್ದೇಶವೂ ಕೂಡ ಇಲ್ಲ. ಆಜ್ಞೆಯು ರಮಾನಿಯಾನಿಯಾಲ್ಲಿ ತಪ್ಪಾಗಿದೆಯೇ ವಿನಃ ಮತ್ತೇನೂ ಇಲ್ಲ. ಅಧಿಕಾರಿಗಳು ಕಾರಣವಿಲ್ಲದೇ ಪತ್ರಿಕಾ ಹೇಳಿಕೆಗಳನ್ನು ಕೊಡತಕ್ಕಂತಹ ಅಭ್ಯಾಸ ಮಾಡಿದೆ ಅದನ್ನು ಕಡಿಮೆ ಮಾಡಬೇಕೆಂಬ ನಿರ್ದೇಶನವನ್ನು ಕೊಡಬೇಕೆಂದು ಹೇಳಿದ್ದೇನೆ. ಯಾವುದೇ ತಪ್ಪು ವರದಿಯನ್ನು ಕೊಟ್ಟು ಸಭೆಯನ್ನು ತಪ್ಪು ದಾರಿಗೆ ಎಳೆಯತಕ್ಕಂಥಹ ಉದ್ದೇಶ ನನಗೆ ಇಲ್ಲ ಇದ್ದ ವಿಷಯವನ್ನು ಸಭೆಯ ಮುಂದಿಟ್ಟಿದ್ದೇನೆ. ಇದನ್ನು ಸಭೆಯ ಹಕ್ಕು ಚ್ಯುತಿಗೆ ಒಳಪಡಿಸಬಾರದೆಂದು ವಿನಂತಿಸುತ್ತೇನೆ.

ಶ್ರೀ ಕೆ. ಹೆಚ್. ಶ್ರೀನಿವಾಸ್.—ಈಗ ಏನು ಸಿ. ಐ. ಡಿ. ರಿಪೋರ್ಟ್‌ಅನ್ನು ತರಿಸಿಕೊಂಡು ಆದರ ಪ್ರಕಾರ ಸಬ್ ಇನ್ಸ್‌ಪೆಕ್ಟರ್‌ರವರನ್ನು ಅಮಾನತ್ತಿನಲ್ಲಿಡುವುದಕ್ಕೆ ಆಜ್ಞೆ ಮಾಡಿದ್ದೇವೆಂದು ಹೇಳಿದಾರೆ ಆದರ ತಾತ್ಪರ್ಯ ಹೇಳಿಕೆಯಲ್ಲಿ ಆ ಸಬ್‌ಇನ್ಸ್‌ಪೆಕ್ಟರ್‌ರವರ ಹೆಸರನ್ನು ಇಲ್ಲ ಎರಡು ವರದಿಯನ್ನು ತರಿಸಿಕೊಂಡಿದ್ದೇವೆಂದು ಇದೆ. ಸಿ. ಐ. ಡಿ. ಯಿಂದ ತರಿಸಿಕೊಂಡಿದ್ದೇವೆಂದು ಇಲ್ಲಿ ಇಲ್ಲ. ಮೂರನೇ ತಾರೀಖು ಶಿವಮೊಗ್ಗಕ್ಕೆ ಟೆಲಿಗ್ರಾಂ ಕೊಟ್ಟಿದ್ದಾರೆ ಆ ಆ ಸಬ್‌ಇನ್ಸ್‌ಪೆಕ್ಟರ್‌ರವರ ಹೆಸರನ್ನು

ಕಳಿಸಿಕೊಡಿ ಎಂದು. ಕಂಪ್ಲೈಂಟ್‌ನಲ್ಲಿ ಪರಮೇಶ್ವರಪ್ಪ ಎಂಬ ಹೆಸರು ಇದೆ ಸಸ್ಪೆಂಡ್ ಮಾಡಿರ ತಕ್ಕಂಥಾದ್ದು ಗಂಗಾಧರಯ್ಯ ಎಂಬುವವರನ್ನು, ಇದಕ್ಕೆ ಸಂಬಂಧವಿಲ್ಲದೇ ಇರುವವರನ್ನು ಸಸ್ಪೆಂಡ್ ಮಾಡಿದ್ದಾರೆ. ಇದು ಬಹಳ ಗಂಭೀರವಾದಂತಹ ಪ್ರಶ್ನೆ, ನನಗೆ ಇವರ ಹತ್ತಿರ ಸ್ನೇಹವೂ ಇಲ್ಲ, ದ್ವೇಷವೂ ಇಲ್ಲ, ಅವರು ಯಾರೆಂದು ನನಗೆ ಗೊತ್ತಿಲ್ಲ. ಈ ಎರಡು ಇಲಾಖೆಗಳು ಈ ರೀತಿ ಮಾಡಿ ಕೊಂಡು ನಗೆಪಾಟಲಾಗುವುದಕ್ಕೆ ಬಿಡಬಾರದು. ಈ ವಿಷಯದ ಇತ್ಯರ್ಥವೂ ನಗೆಪಾಟಲಾಗಿ ನಡೆಯು ತ್ತಿದೆ. ಇದನ್ನು ಗಂಭೀರವಾಗಿ ತೆಗೆದುಕೊಂಡು ಇತ್ಯರ್ಥ ಮಾಡಬೇಕು. ಸಸ್ಪೆಂಡ್ ಮಾಡುವುದು ತಡವಾದರೂ ಪರವಾಗಿಲ್ಲ., ನ್ಯಾಯವಾಗಿ ಜನಗಳಿಗೆ ವಿಶ್ವಾಸ ಬರತಕ್ಕಂತಹ ರೀತಿಯಲ್ಲಿ ಎನ್‌ಕ್ವೈರಿ ಯಾಗಬೇಕು. ಇದಕ್ಕೆ ಸಮಂಜಸವಾದ ಉತ್ತರ ಬೇಕು ಹಕ್ಕುಭಾದ್ಯತೆಯೂ ಬೇಡ ಏನೂ ಬೇಡ, ಸರಿಯಾದ ಉತ್ತರವನ್ನು ಮಾನ್ಯ ಮಂತ್ರಿಗಳು ಕೊಡಬೇಕು.

ಶ್ರೀ ಬಿ. ರಾಚಯ್ಯ.—ಯಾವ ಇಬ್ಬರು ಸಬ್‌ಇನ್ಸ್‌ಪೆಕ್ಟರ್‌ಗಳು ಇವರಲ್ಲಿ ಇನ್‌ವಾಲ್ವ್ ಆಗಿದ್ದಾರೋ ಅವರನ್ನು ಸಸ್ಪೆಂಡ್ ಮಾಡಿ ಎಂದು ಆಜ್ಞೆ ಮಾಡಿದ್ದೇನೆ, ಇಂತಹ ಹೆಸರಿನ ವ್ಯಕ್ತಿಗಳು ಎಂದು ಆಜ್ಞೆ ಮಾಡಿಲ್ಲ.

ಶ್ರೀ ಕೆ.ಹೆಚ್. ಶ್ರೀನಿವಾಸ್.—ಅವರಿಗೆ ರಿಪೋರ್ಟ್ ಬಂದ ಮೇಲೆ ಹೆಸರು ಇರಲಿಲ್ಲವೇ ?

ಶ್ರೀ ಬಿ. ರಾಚಯ್ಯ.—ಇಬ್ಬರು ಸಬ್‌ಇನ್ಸ್‌ಪೆಕ್ಟರ್‌ರವರನ್ನು ಸಸ್ಪೆಂಡ್‌ನಲ್ಲಿ ಇಡಿ ಎಂದು ಹೇಳಿದ್ದೇನೆ.

ಶ್ರೀ ಬಿ. ಸ್ವಾಮಿರಾವ್.—ಮಾನ್ಯ ಅಧ್ಯಕ್ಷರೇ, ಮಾನ್ಯ ರಾಚಯ್ಯನವರು.....

(ಗೊಂದಲ)

ಅಧ್ಯಕ್ಷರು.—ಮಾನ್ಯ ಮಂತ್ರಿಗಳು ಹೇಳಿಕೆಯನ್ನು ಕೊಟ್ಟಿದ್ದಾರೆ, ಮಾನ್ಯ ಸದಸ್ಯರು ಹಾಗೂ ಸಚಿವರ ಹೇಳಿಕೆಯನ್ನು ಕೇಳಿದ್ದೇನೆ, ಈ ಹಕ್ಕುಚ್ಯುತಿ ನೋಟೀಸ್ ಅನ್ನು ತಿರಸ್ಕಾರ ಮಾಡಿದ್ದೇನೆ. ನೀವು ಏನು ಮಾತಾಡಿದರೂ ರೆಕಾರ್ಡ್‌ಗೆ ಹೋಗುವುದಿಲ್ಲ.

ಶ್ರೀ ಬಿ. ಸ್ವಾಮಿರಾವ್.—ರೆಕಾರ್ಡ್ ಮಾಡದೇ ಹೋದರೂ ಚಿಂತೆ ಇಲ್ಲ. ಮಾನ್ಯ ರಾಚಯ್ಯನವರಿಗೆ ಒಂದು ಮಾತನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ.

ಅಧ್ಯಕ್ಷರು.—ಈಗ ನೀವು ಏನು ಹೇಳಿದರೂ ರೆಕಾರ್ಡ್‌ಗೆ ಹೋಗುವುದಿಲ್ಲ, ನೀವು ಮಾತಾಡಿ ದ್ದನ್ನು ಎಕ್ಸ್‌ಪಂಜ್ ಮಾಡುತ್ತೇನೆ.

ಶ್ರೀ ಪಿ. ರತ್ನಾಕರ್.—ಮಾನ್ಯ ಅಧ್ಯಕ್ಷರೇ, ಅವರಿಗೆ.....

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಮಾನ್ಯ ಶ್ರೀನಿವಾಸ್‌ರವರು ಏನು ನೋಟೀಸ್ ಕೊಟ್ಟಿ ದ್ದಾರೆ, ಅದರ ಬಗ್ಗೆ ಮಾತನಾಡಬೇಕೆಂದಿದ್ದಾರೆ.

ಗಮನ ಸೆಳೆಯುವ ಸೂಚನೆ

ಅಧ್ಯಕ್ಷರು.—ನಾನು ಅವಕಾಶ ಕೊಡುವುದಿಲ್ಲ. ದಯವಿಟ್ಟು ಕೂಡ್ರಿ.

(ಗೊಂದಲ)

ಶ್ರೀ ಪಿ. ರತ್ನಾಕರ್.—ಅಧ್ಯಕ್ಷರೇ, ಅವರು ಇಷ್ಟೊಂದು ಕೇಳುತ್ತಿಲ್ಲದ್ದಾರೆ. ಒಂದು ನಿಮಿಷ ಅವಕಾಶ ಕೊಡಿ.....

(ಗೊಂದಲ)

ಅಧ್ಯಕ್ಷರು.—ನೀವು ಇನ್ನೊಂದು ವಿಷಯಕ್ಕೆ ಹಿಡಿಳಿ ಕೊಡಿ. ಅವಕಾಶ ಕೊಡುತ್ತೇನೆ. ನಾನು ರೂಲಿಂಗ್ ಕೊಟ್ಟಾಗಿದೆ. ದಯವಿಟ್ಟು ಕೂಡ್ರಿ.

(ಗೊಂದಲ)

ಅಧ್ಯಕ್ಷರು.—ಶ್ರೀನಿವಾಸ್‌ರವರೇ, ತಾವು ಗಮನ ಸೆಳೆಯಿರಿ.